

ಇನ್ನು ಬಾಕಿ ಉಳಿದದ್ದು 'ಗಗ್ಗರ' ಮತ್ತು ಅಣಿ ಕಟ್ಟುವುದು. ಕುಡಿಬಾಳೆ ಎಲೆಯಲ್ಲಿ ಅಕ್ಕಿ ಹೂಗಳನ್ನಿರಿಸಿ ಬೆಳ್ಳಿಯ ಗಗ್ಗರವನ್ನಿಡಲಾಗಿತ್ತು. ಮಾಯಿಲ ಜಾತಿಯ ಗುರಿಕಾರನಲ್ಲಿ ಅದೇನೋ ತಗ್ಗಿಬಗ್ಗಿ ಪಿಸಿ ಪಿಸಿ ಮಾತನಾಡುತ್ತಿದ್ದ, ದುಗ್ಗ 'ಗಗ್ಗರ ತೆಗೆದುಕೊಳ್ಳಲೇ... ಸರ್ವರ ಒಪ್ಪಿಗೆಯೇ?' ಎಂದು ತನ್ನದೇ ಆದ ವಿಶಿಷ್ಟ ಗಂಭೀರ ಸ್ವರದಲ್ಲಿ ವಿನಂತಿಸಿಕೊಂಡಾಗ ಗುರಿಕಾರನೇ ಮಾಯಿಲ ಜತೆ ಓಡೋಡಿ ಗಗ್ಗರವಿಟ್ಟಲ್ಲಿಗೆ ಧಾವಿಸಿ ಬಂದಿದ್ದ. ಮಾಯಿಲನ ಎದೆಯಲ್ಲಿ ಅದೇನೋ ತಳಮಳ, ದುಗ್ಗ ಸಾಕ್ಷಾತ್ ಕಲ್ಲುರ್ಟಿಯೇ ಎದುರು ನಿಂತಂತಿದ್ದಾಳೆ.

ಗುರಿಕಾರ ಹಾಗೂ ಮಾಯಿಲ ಇಬ್ಬರೂ ಬಗ್ಗಿ ತಲೆಬಾಗಿ ಕೈಮುಗಿದು 'ತೆಗೆದುಕೊಳ್ಳಬಹುದು' ಎಂದು ಗಗ್ಗರವನ್ನಿಟ್ಟ ಬಾಳೆಎಲೆಯತ್ತ ಕೈ ತೋರಿಸಿದರು. ದುಗ್ಗ ಬಗ್ಗಿ ಎರಡೂ ಗಗ್ಗರಗಳನ್ನು ಕೈಗೆ ತೆಗೆದುಕೊಳ್ಳಬೇಕಾದರೆ ವಾದ್ಯದ ಪದ್ದಪ್ಪ ಆತನಿಗೂ ಆವೇಶ ಬಂದಿದೆಯೆನ್ನುವಂತೆ ವಾದ್ಯವನ್ನು ತಾರಕಕ್ಕೇರಿಸಿದ್ದ. ಬ್ಯಾಂಡಿನ ಪೀಂಚನೂ ವಾದ್ಯಕ್ಕಿಂತಲೂ ಸ್ವಲ್ಪ ಜೋರಾಗಿಯೇ ಬಾರಿಸತೊಡಗಿದ. ವಾದ್ಯ ಬ್ಯಾಂಡಿನ ಸ್ವರ ಕೇಳಿಸುತ್ತಿದ್ದರೂ ಸಿಡಿಮದ್ದಿನ ಸ್ವರ ಕೇಳಿಸುತ್ತಿಲ್ಲ. ಮಾಯಿಲನ ಮೂರನೇ ಮಗ ಸಿಡಿಮದ್ದಿನ ಉಸ್ತುವಾರಿ ವಹಿಸಿಕೊಂಡಿದ್ದ ರಾಮಣ್ಣನನ್ನು ಹುಡುಕುವ ಗಡಿಬಿಡಿಯಲ್ಲಿದ್ದ, ಹಟ್ಟಿಯೊಳಗೆ ಮಲಗಿದ್ದ ರಾಮಣ್ಣನನ್ನು ಎಬ್ಬಿಸಿ ಸಿಡಿಮದ್ದು ಸಿಡಿಸುವಷ್ಟರಲ್ಲಿ ದುಗ್ಗ ಗಗ್ಗರ ಕಟ್ಟಿಕೊಂಡೂ ಅಣಿಯನ್ನು ತಲೆಗೇರಿಸಿಕೊಂಡು ಮಾಚುವಿನ ಕೈಯಲ್ಲಿದ್ದ ಕನ್ನಡಿಯಲ್ಲಿ ತನ್ನ ರೂಪು ನೋಡಿಕೊಳ್ಳುತ್ತಿದ್ದ. ಮುಖದ ಅರೆದಾಳ ದುಗ್ಗನಿಗೆ ಭೂತದ ಶೋಭೆಯನ್ನೇ ತಂದುಕೊಟ್ಟಿತ್ತು.

ಅದುವರೆಗೂ ಅಂಗಳದಲ್ಲೇ ಅತ್ತಿತ್ತ ಓಡಾಡುತ್ತಿದ್ದ ಮಾಯಿಲ, ದುಗ್ಗ ಗಗ್ಗರ ಅಣಿ ಕಟ್ಟಿಕೊಂಡಾಕ್ಷಣ ಚಾವಡಿ ಏರಿ ಮರೆಯಾಗಿದ್ದ. ಮಾಯಿಲ ಚಾವಡಿ ಏರಿದವನೇ ಅಲ್ಲೇ ಕಲೆಂಬಿಯ ಮೇಲಿಟ್ಟಿದ್ದ ಮಲ್ಲಿಗೆ ಅಬ್ಬಲಿಗೆಗಳ ಅಟ್ಟೆಯನ್ನ ಹಿಡಿದುಕೊಂಡು ಭೂತದ ಸ್ಥಾನದೊಳಗೆ ಹೊಕ್ಕುಬಿಟ್ಟ. ಆಗಲೇ ಭೂತದ ಸ್ಥಾನದೊಳಗೆ ಪೂಜಾರಿ ಭೂತದ ಮಣೆ, ಮಂಚ, ಕಟ್ಟಳೆಗಳನ್ನು ಶುದ್ಧಗೊಳಿಸಿ ಓರಣಗೊಳಿಸುತ್ತಿದ್ದ. ಮಾಯಿಲನ ಕೈಯಿಂದ ಹೂಗಳ ರಾಶಿಯನ್ನು ತೆಗೆದುಕೊಂಡವನೇ ಭೂತದ ಮೊಗಕ್ಕೂ ಹೂಗಳ ಅಲಂಕಾರ ನಡೆಸಲಾರಂಭಿಸಿದ.

ಭೂತದ ಪೂಜಾರಿ ಕೊರಗಮೂಲ್ಯನದ್ದು ಯಾವತ್ತೂ ನಿಧಾನದ ಕೆಲಸ. ಹೊರಗಡೆ ಭೂತಕ್ಕೆ ಗಗ್ಗರ ಅಣಿ ಕಟ್ಟಿಕೊಂಡಿದ್ದರೂ, ಪೂಜಾರಿ ಆಗಿನ್ನೂ ಪನಿಯಾರ ಸಿದ್ಧ ಮಾಡಿರಲಿಲ್ಲ. ಮಾಯಿಲ ಅವಸರಪಡಿಸಿದಾಗ ಕೊರಗಮೂಲ್ಯ 'ನೀವೊಮ್ಮೆ ಹೊರಗೆ ಹೋಗಿ ಮಾರಾಯ್ರೇ... ನನ್ನ ಕೈಕಾಲು ಕಟ್ಟಿಸಬೇಡಿ' ಎಂದು ಸಿಡುಕಿದಾಗ ಮಾಯಿಲ ಮುನಿಸಿಕೊಂಡೇ ಅಂಗಳಕ್ಕೆ ನಡೆದಿದ್ದ.

ಕೊರಗ ಮೂಲ್ಯನ ಭೂತದ ಪನಿಯಾರ ಸಿದ್ಧವಾದೊಡನೆ, ಭೂತದ ಮಂಚದಲ್ಲಿ ಪನಿಯಾರ